# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1326 (1503) |
| **ಸದಸ್ಯರ ಹೆಸರು** | : | ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : | 17.03.2026 |
| **ಉತ್ತರಿಸುವವರು** | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಾರ್ವಜನಿಕ ಕುಡಿಯುವ ನೀರು ಪೂರೈಸುವ ಪೂರ್ವದಲ್ಲಿ ನೀರಿನ ಗುಣಮಟ್ಟ ಪರೀಕ್ಷಿಸಿ ಸರಬರಾಜು ಮಾಡಬೇಕಿರುವುದು ನಿಜವೇ; ಹಾಗಿದ್ದಲ್ಲಿ, ಎಷ್ಟು ದಿನಗಳಿಗೊಮ್ಮೆ ನೀರಿನ ಗುಣಮಟ್ಟ ಪರೀಕ್ಷಿಸಬೇಕು; ಈಗ ಎಷ್ಟು ದಿನಕ್ಕೆ ಪರೀಕ್ಷಿಸಲಾಗುತ್ತಿದೆ; (ವಿವರವಾಗಿ ಮಾಹಿತಿ ನೀಡುವುದು) | ಸಾರ್ವಜನಿಕರಿಗೆ ಕುಡಿಯುವ ನೀರು ಪೂರೈಸುವ ಪೂರ್ವದಲ್ಲಿ ನೀರಿನ ಗುಣಮಟ್ಟ ಪರೀಕ್ಷಿಸಿ ಸರಬರಾಜು ಮಾಡಬೇಕಾಗಿರುತ್ತದೆ.<br>ಕುಡಿಯುವ ನೀರಿನ ಗುಣಮಟ್ಟದ ಪರೀಕ್ಷೆಯನ್ನು CPHEEO ಮಾನದಂಡಗಳ ಪ್ರಕಾರ ಮಾಡಬೇಕಾಗಿದ್ದು, ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.<br>ಪ್ರಸ್ತುತ ಮಂಡ್ಯ ನಗರದ ಜಲಶುದ್ಧೀಕರಣ ಘಟಕದಲ್ಲಿ ವಾರಕೊಮ್ಮೆ 01 ನೀರಿನ ಮಾದರಿ ಹಾಗೂ ವಿತರಣಾ ಜಾಲ ವ್ಯವಸ್ಥೆಯಲ್ಲಿ ಪ್ರತಿದಿನ 04 ನೀರಿನ ಮಾದರಿಯ ಗುಣಮಟ್ಟವನ್ನು ಪರೀಕ್ಷಿಸಿ ಸಾರ್ವಜನಿಕರಿಗೆ ನೀರು ಸರಬರಾಜನ್ನು ಪೂರೈಸಲಾಗುತ್ತಿದೆ. |
| ಆ) | ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಕೆ.ಆರ್.ಪೇಟೆ ಮತ್ತು ಇತರೆ ಸ್ಥಳೀಯ ಸಂಸ್ಥೆಗಳು ನಿಯಮಿತವಾಗಿ ಕುಡಿಯವ ನೀರಿನ ಗುಣಮಟ್ಟ ಪರೀಕ್ಷಿಸದೇ ನೀರು ಪೂರೈಕೆ ಮಾಡಲಾಗುತ್ತಿದೆ ಎನ್ನುವ ಸಾರ್ವಜನಿಕ ದೂರುಗಳು ಕುರಿತು ಸರ್ಕಾರದ ಕ್ರಮವೇನು; | ಸಾರ್ವಜನಿಕರಿಂದ ಯಾವುದೇ ದೂರುಗಳು ಸ್ವೀಕೃತಿಯಾಗಿರುವುದಿಲ್ಲ. |
| ಇ) | ಹಾಗೇ, ಮದ್ದೂರು, ಮಳವಳ್ಳಿ, ನಾಗಮಂಗಲ ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಪರೀಕ್ಷಿಸಲಾದ ನೀರಿನ ಮಾದರಿಗಳಲ್ಲಿ E.coli (Escherichia Coli) ಹಾಗೂ ಇತರೆ ಅಶುದ್ಧ ಅಂಶಗಳು ಇರುವುದು ಕಂಡ ಬಂದಿರುವುದು ನಿಜವೇ; ಹಾಗಿದ್ದಲ್ಲಿ, ಗುಣಮಟ್ಟದ ನೀರು ಪೂರೈಕೆಗೆ ಸರ್ಕಾರದ ಕ್ರಮವೇನು; | • ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಮತ್ತು ನಾಗಮಂಗಲ ಪುರಸಭೆಗಳಲ್ಲಿ ನೀರಿನ ಗುಣಮಟ್ಟವನ್ನು ಪರೀಕ್ಷಿಸಲಾಗಿ E.coli (Escherichia Coli) ಬ್ಯಾಕ್ಟೀರಿಯ ಕಂಡುಬಂದಿರುತ್ತದೆ. ಹಾಗಾಗಿ, ತಕ್ಷಣವೇ ನೀರಿನ ಸರಬರಾಜನ್ನು ನಿಲ್ಲಿಸಿ, ಎಲ್ಲಾ ನೀರಿನ ಟ್ಯಾಂಕರ್ ಗಳಿಗೆ ಸೋಂಕು ನಿವಾರಕ (Disinfectant) ಹಾಕಿ |

| | | |
|---|---|---|
| | | E.coli ನಾಶವಾದ ನಂತರ ಮತ್ತೊಮ್ಮೆ ಪರೀಕ್ಷಿಸಿ, ದೃಢೀಕರಿಸಿಕೊಂಡ ನಂತರ ಸಾರ್ವಜನಿಕರಿಗೆ ನೀರು ಸರಬರಾಜು ಮಾಡಲಾಗುತ್ತಿದೆ.<br>• ಮುಂದುವರೆದು, ನೀರು ಶುದ್ಧೀಕರಣ ಘಟಕ ಹಾಗೂ ಯೂಸರ್ ಎಂಡ್ ನಲ್ಲಿಯೂ ಸಹ ಕ್ಲೋರಿನ್ ಪ್ರಮಾಣವನ್ನು ಪರೀಕ್ಷಿಸಲು ಕ್ಲೋರಿನ್ ಕಿಟ್‌ನ್ನು ಬಳಸಲಾಗುತ್ತಿದೆ. ಈ ರೀತಿಯಾಗಿ ಗುಣಮಟ್ಟದ ನೀರಿನ ಪೂರೈಕೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರನ್ನು ಸುರಕ್ಷಿತವಾಗಿ ಹಾಗೂ ಅಗತ್ಯವಾಗಿ ಪೂರೈಸುವ ಕುರಿತು ಅನುಸರಿಸಬೇಕಾದ ಮಾನದಂಡಗಳನ್ನು ಹೊರಡಿಸಲಾಗಿದ್ದು, ಅದರಂತೆ ಕ್ರಮವಹಿಸಲು ಸೂಚಿಸಲಾಗಿದೆ. (ಅನುಬಂಧದಲ್ಲಿ ನೀಡಿದೆ) |
| **ಈ)** | "ಜಲ-ಹೀ-ಅಮೃತ್" ಯೋಜನೆ ಪ್ರಮುಖ ಅಂಶಗಳೇನು; | • ಜಲ ಹೀ ಅಮೃತ್ (JHA) ಕಾರ್ಯಕ್ರಮವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಬಳಸಿದ ನೀರು ಸಂಸ್ಕರಣಾ ಘಟಕಗಳ (UWTPs) ಅತ್ಯುತ್ತಮ ಕಾರ್ಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ.<br>• ಮರು ಬಳಕೆಯನ್ನು ಪ್ರೋತ್ಸಾಹಿಸುವುದು ಮತ್ತು ಮರು ಬಳಕೆಗೆ ಯೋಗ್ಯವಿರುವಂತೆ KSPCB/CPCB ಮಾನದಂಡಗಳನುಗುಣವಾಗಿ ಬಳಸಿದ ನೀರಿನ ಸಂಸ್ಕರಣೆಯನ್ನು ಖಚಿತಪಡಿಸಿಕೊಳ್ಳುವುದು.<br>• KSPCB/CPCB ಮಾನದಂಡಗಳನುಗುಣವಾಗಿ ಬಳಸಿದ ನೀರಿನ ಸಂಸ್ಕರಣೆಯನ್ನು ಖಚಿತಪಡಿಸಿಕೊಳ್ಳಲು UWTP ನಿರ್ವಾಹಕರು/ULB ಅಧಿಕಾರಿಗಳ STP ನಿರ್ವಹಣಾ ಕೌಶಲ್ಯಗಳನ್ನು ವೃದ್ಧಿಸುವುದು.<br>• ನೀರಿನ ಸಂರಕ್ಷಣೆ ಮತ್ತು ಸಮರ್ಥಕ ಬಳಕೆ: ಸಂಸ್ಕರಿಸಿದ ಬಳಸಿದ ನೀರಿನ ಮೂಲಕ ಜಲಸಂಪನ್ಮೂಲಗಳನ್ನು ರಕ್ಷಿಸುವುದು ಮತ್ತು ಮರುಬಳಕೆಯನ್ನು ಪ್ರೋತ್ಸಾಹಿಸುವುದು. |
| **ಉ)** | ಈ ಯೋಜನೆಗೆ ಮಂಡ್ಯ ಜಿಲ್ಲೆಯಲ್ಲಿ ಯಾವ್ಯಾವ ಸ್ಥಳೀಯ ಸಂಸ್ಥೆಗಳು ಆಯ್ಕೆಯಾಗಿವೆ; ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಈ ಯೋಜನೆಯಡಿ ಏನೆಲ್ಲಾ ಚಟುವಟಿಕೆಗಳನ್ನು ತೆಗೆದುಕೊಳ್ಳಲು ಅವಕಾಶವಿದೆ? (ವಿವರವಾದ ಮಾಹಿತಿ | ಜಲ್ ಹೀ ಅಮೃತ್ ಯೋಜನೆ ಅಡಿಯಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು, ಶ್ರೀರಂಗಪಟ್ಟಣ ಮತ್ತು ನಾಗಮಂಗಲ ನಗರ ಸ್ಥಳೀಯ ಸಂಸ್ಥೆಗಳು ಆಯ್ಕೆಯಾಗಿದ್ದು, ಇದಕ್ಕಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಪ್ರೋತ್ಸಾಹ ಧನದ ವಿವರ ಈ ಕೆಳಕಂಡಂತಿವೆ, |

| | | |
|---|---|---|
| | ನೀಡುವುದು) | \| ನಗರ ಸ್ಥಳೀಯ ಸಂಸ್ಥೆಗಳು \| ಒಟ್ಟು ಪ್ರೋತ್ಸಾಹ ಧನ (ರೂ. ಕೋಟಿಗಳಲ್ಲಿ) \| ಬಿಡುಗಡೆ(70 % -ಒಂದನೇ ಕಂತು) \| |

| ನಗರ ಸ್ಥಳೀಯ ಸಂಸ್ಥೆಗಳು | ಒಟ್ಟು ಪ್ರೋತ್ಸಾಹ ಧನ (ರೂ. ಕೋಟಿಗಳಲ್ಲಿ) | ಬಿಡುಗಡೆ(70 % -ಒಂದನೇ ಕಂತು) |
|---|---|---|
| ಮದ್ದೂರು | 0.25 | 0.175 |
| ಶ್ರೀರಂಗಪಟ್ಟಣ | 0.75 | 0.525 |
| ನಾಗಮಂಗಲ | 0.25 | 0.175 |
| **ಒಟ್ಟುಮೊತ್ತ** | **1.25** | **0.875** |

ಜಲ್ ಹೀ ಅಮೃತ್ ಯೋಜನೆ ಅಡಿಯಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ತೆಗೆದುಕೊಳ್ಳಲು ಅವಕಾಶವಿದೆ,

**Real time monitoring ವ್ಯವಸ್ಥೆಗಳ ಸ್ಥಾಪನೆ**

- SCADA ವ್ಯವಸ್ಥೆಯ ಸ್ಥಾಪನೆ / ಸುಧಾರಣೆ
- OCEMS (Online Continuous Effluent Monitoring System) ಅಳವಡಿಕೆ/ಸುಧಾರಣೆ
- ಡೇಟಾ ಡ್ಯಾಶ್ ಬೋರ್ಡ್, ಸೆನ್ಸರ್‌ಗಳು, ಸ್ವಯಂ ನಿಯಂತ್ರಣ ವ್ಯವಸ್ಥೆಗಳು

**ಮರುಬಳಕೆ (Reuse) ಮೂಲಸೌಕರ್ಯ ನಿರ್ಮಾಣ / ವಿಸ್ತರಣೆ**

- ಸಂಸ್ಕರಿಸಿದ ತ್ಯಾಜ್ಯ ನೀರಿನ ಮರು ಬಳಕೆಗೆ ಪೈಪ್ ಲೈನ್‌ಗಳು
- ಸ್ಟೋರೇಜ್ ಟ್ಯಾಂಕ್ ಗಳು, ಪಂಪುಗಳು
- ಕೈಗಾರಿಕೆ/ಉದ್ಯಾನ/ವ್ಯವಸಾಯಕ್ಕೆ treated water supply ವ್ಯವಸ್ಥೆಗಳು

**ತಾಂತ್ರಿಕ ನವೀಕರಣಗಳು (Technology Upgrades)**

- ಯುನಿಟ್ ಆಪರೇಷನ್‌ಗಳ ಸುಧಾರಣೆ
- Electro-Mechanicalಉಪಕರಣಗಳ ನವೀಕರಣ
- ಜೈವಿಕ, ತೃತೀಯ ಮತ್ತು ಅಂತಿಮ ಸಂಸ್ಕರಣಾ ಘಟಕಗಳ ಉತ್ತಮೀಕರಣ

**Renewable/ Alternate Energy ಬಳಕೆಗೆ**

- ಸೌರ ಶಕ್ತಿಸ್ಥಾಪನೆ (Solar PV)
- ಬೈಯೋಗ್ಯಾಸ್-ಜನರೇಟರ್‌ಗಳು
- Energy Optimization ವ್ಯವಸ್ಥೆಗಳು

**ಬಯೋಸಾಲಿಡ್ ನಿರ್ವಹಣೆ (Biosolids Management)**

- Sludge Thickeners and drying beds

| | | |
|---|---|---|
| | | • ಕಂಪೋಸ್ಟ್‌ಲಭ್ಯಗಳು<br>• Biosolids marketing/selling/reuse systems.<br>**ಸಾಮರ್ಥ್ಯ ನಿರ್ಮಾಣ (Capacity Building)**<br>• UWTP ಸಿಬ್ಬಂದಿಗೆಕೌಶಲ್ಯತರಬೇತಿ<br>• ಸುರಕ್ಷತಾಮತ್ತು SOP ತರಬೇತಿ<br>**UWTP ಯ ಒಟ್ಟಾರೆ ಕಾರ್ಯಕ್ಷಮತಾ ಸುಧಾರಣೆ**<br>• ಲೈಟಿಂಗ್, ಸುರಕ್ಷತಾವ್ಯವಸ್ಥೆಗಳುಮತ್ತು Gas detectors<br>• ಪ್ರಯೋಗಾಲಯ (Laboratory) ಸುಧಾರಣೆ<br>• ನಿರ್ವಹಣಾ SOP ಗಳಅನುಷ್ಠಾನ<br>ಸ್ವಚ್ಛತೆ ಮತ್ತು ಸುರಕ್ಷತಾ ಮೂಲಸೌಕರ್ಯ ಸುಧಾರಣೆ |

**ಸಂಖ್ಯೆ: ನಅಇ 99 ಜಿಇಎಲ್ 2026**

**( ಬಿ.ಎಸ್. ಸುರೇಶ )**

ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ನಿರ್ದೇಶಕರ ಕಚೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ.080-22866302/ 22867307
ಇ-ಮೇಲ್.dmablr@gmail.com
ವೆಬ್‌ಸೈಟ್: www.municipaladmn.gov.in
೨ನೇ ಮಹಡಿ. ವಿಶ್ವೇಶ್ವರಯ್ಯ ಗೋಪುರ.
ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001

2092959 File No.:DMA/UPA/MISC/13/2026 ದಿನಾಂಕ: 10-03-2026

**ಸುತ್ತೋಲೆ**

**ವಿಷಯ:** ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರನ್ನು ಸುರಕ್ಷಿತವಾಗಿ ಹಾಗೂ ಅಗತ್ಯವಾಗಿ ಪೂರೈಸುವ ಕುರಿತು.

**ಉಲ್ಲೇಖ:**
1. ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂ: 596160/DMA/DEV/OTH/35/2021, ದಿನಾಂಕ:25/10/2021
2. ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂ:802905/DMA/DEV/OTH/61/2022, ದಿನಾಂಕ:29/10/2022
3. ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂ: 596160/DMA/UPA/SFCW/1/2026, ದಿನಾಂಕ:16/01/2026

******

ನಗರ ಸ್ಥಳೀಯ ಸಂಸ್ಥೆಗಳಿಗೆ 12ನೇ ಷೆಡ್ಯೂಲ್‌ನಲ್ಲಿ ತಿಳಿಸಿರುವ 18 ಕಾರ್ಯಗಳಲ್ಲಿ ಶುದ್ಧ ಕುಡಿಯುವ ನೀರು ಸರಬರಾಜು ಒಂದು ಪ್ರಮುಖ ಕಾರ್ಯವಾಗಿದೆ. ಸಾರ್ವಜನಿಕರ ಆರೋಗ್ಯವು ಮುಖ್ಯವಾಗಿ ಕುಡಿಯುವ ನೀರು ಪೂರೈಕೆಯ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸರಿಯಾದ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಸೂಚಿಸಲು ಸರ್ಕಾರದಿಂದ ಕಾಲಕಾಲಕ್ಕೆ ಉಲ್ಲೇಖ(1) ರಿಂದ (3)ರವರೆಗೆ ಸುತ್ತೋಲೆಗಳನ್ನು, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುವಂತೆ ಹೊರಡಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಸುತ್ತೋಲೆಗಳನ್ನು ಒಗ್ಗೂಡಿಸಿ ಒಂದೇ ಸುತ್ತೋಲೆಯನ್ನು ಹೊರಡಿಸುವ ಅವಶ್ಯಕತೆಯಿರುತ್ತದೆ. ಆದ್ದರಿಂದ ಉಲ್ಲೇಖಿತ ಸುತ್ತೋಲೆಗಳನ್ನು ನಿಷ್ಕ್ರಿಯಗೊಳಿಸಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ/ನಗರ ಪಾಲಿಕೆಗಳು ಕೆಳಕಂಡ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಕ್ರಮ ವಹಿಸಲು ತಿಳಿಸಲಾಗಿದೆ:-

1. ಕುಡಿಯುವ ನೀರು ಸರಬರಾಜು ಮಾಡುವ ಮೊದಲು ನೀರಿನ ಮೂಲಗಳು, ನೀರಿನ ಸಂಸ್ಕರಣೆ ಘಟಕ, ನೀರಿನ ಶೇಖರಣೆ ಹಾಗೂ ನೀರಿನ ಸರಬರಾಜು ಮಾಡುವ ಹಂತಗಳಲ್ಲಿ ಗುಣಮಟ್ಟದ ಪರೀಕ್ಷೆಗಳನ್ನು ಕಡ್ಡಾಯವಾಗಿ ಮಾಡುವುದು.
2. ಕುಡಿಯುವ ನೀರು ಸರಬರಾಜು ವಿತರಣಾ ಜಾಲವನ್ನು ಕಾಲ ಕಾಲಕ್ಕೆ ಪರೀಕ್ಷಿಸುವುದು ಮತ್ತು ಕೊಳವೆ ಮಾರ್ಗದಲ್ಲಿ ಇತರೆ ಕಲುಷಿತ ನೀರು ಸೇರದಂತೆ ಕ್ರಮವಹಿಸುವುದು.
3. ವಿವಿಧ ಸ್ಥಳಗಳಲ್ಲಿ ಅಥವಾ ಆಯ್ದ ಮನೆಗಳಲ್ಲಿ ಕುಡಿಯುವ ನೀರಿನ ಸ್ಯಾಂಪಲ್ ತೆಗೆದುಕೊಂಡು ಪ್ರಯೋಗಾಲಯದಲ್ಲಿ ಪ್ರತಿದಿನ ಪರೀಕ್ಷಿಸುವುದು. ಕಲುಷಿತ ಇರುವುದು ಕಂಡುಬಂದಲ್ಲಿ ತಕ್ಷಣ ನೀರು ಸರಬರಾಜು ಸ್ಥಗಿತಗೊಳಿಸುವುದು ಹಾಗೂ

ಕಲುಷಿತಗೊಂಡಿರುವ ನೀರನ್ನು ಬಳಸಬಾರದೆಂದು ಸಾರ್ವಜನಿಕರಿಗೆ ತಕ್ಷಣ ತಿಳುವಳಿಕೆ ನೀಡುವುದು.

4. ಪ್ರಯೋಗಾಲಯಗಳು/ಆರ್.ಡಿ.ಪಿ.ಆರ್ ಇಲಾಖೆಯ/ ಆರೋಗ್ಯ ಇಲಾಖೆಯ/FSSAI ಪ್ರಯೋಗಾಲಯಗಳು/ ರಾಜ್ಯದ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಪ್ರಯೋಗಾಲಯಗಳಲ್ಲಿ ಪ್ರತಿದಿನ ನೀರಿನ ಸ್ಯಾಂಪಲ್‌ಗಳನ್ನು ಪರೀಕ್ಷೆಗೊಳಪಡಿಸಲು ಅಗತ್ಯ ಕ್ರಮವಹಿಸುವುದು.

5. ಮಾಸಾಂತ್ಯದಲ್ಲಿ ಹಾಗೂ ವರ್ಷಾಂತ್ಯದಲ್ಲಿ ಸರಬರಾಜುಗೊಳ್ಳುವ ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಕಡ್ಡಾಯವಾಗಿ NABL Accredited ಆಗಿರುವ ಲ್ಯಾಬ್ ಗಳಲ್ಲಿ ಮಾಡಿಸುವುದು.

6. NABL Accredited ಆಗಿರುವ ನೀರಿನ ಗುಣಮಟ್ಟ ಪರೀಕ್ಷಿತಾ ಲ್ಯಾಬ್ ಗಳಲ್ಲಿ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಪ್ರತಿದಿನ/15ದಿನ/1ತಿಂಗಳು/6 ತಿಂಗಳು ಅಂತರದ ನೀರಿನ ಗುಣಮಟ್ಟದ ಪರೀಕ್ಷೆಯನ್ನು ಕೈಗೊಳ್ಳುವುದು.

7. ಕುಡಿಯುವ ನೀರಿನ ಗುಣಮಟ್ಟದ ವಿಶ್ಲೇಷಣಾ ಪರೀಕ್ಷೆಯಲ್ಲಿ Colour, Odour, Turbidity, Hydrogen ion concentration (Ph), Electric Conductivity (EC), Total Dissolved Solids (TDS) Total Hardness (TH), Calcium, Magnesium, Chloride, Fluoride, Sulphate, Nitrates Iron, Alkalinity, Total Suspended Solids ಹಾಗೂ Biological tests for Total Coliforms & E Coli ಮೊದಲಾದ ಅಂಶಗಳ ಬಗ್ಗೆ ಅನುಬಂಧದಲ್ಲಿ ನೀಡಿರುವ ಮಾನದಂಡಗಳಂತೆ ಪರೀಕ್ಷೆಗೊಳಪಡಿಸುವುದು.

8. ನೀರು ಗುಣಮಟ್ಟ ಪರೀಕ್ಷೆಗಳ ವರದಿಗಳನ್ನು ನಿಯಮಿತ ಕಾಲಾವಧಿಯಲ್ಲಿ ಜಲನಿಧಿ ತಂತ್ರಾಂಶದಲ್ಲಿ ಅಪ್ಲೋಡ್ ಮಾಡುವುದು.

9. ಕುಡಿಯುವ ನೀರು ಸರಬರಾಜಿನ ಎಲ್ಲಾ ಕೊಳವೆ ಮಾರ್ಗಗಳನ್ನು **ಅನುಬಂಧದಲ್ಲಿ** ನೀಡಿರುವ ಮಾನದಂಡಗಳಂತೆ ಕೈಗಾರಿಕಾ ತ್ಯಾಜ್ಯ ಒಳಚರಂಡಿ ಮತ್ತು ತ್ಯಾಜ್ಯ ನೀರು, ರಾಸಾಯನಿಕ ತ್ಯಾಜ್ಯ, ಅಸಮರ್ಪಕ ಒಳಚರಂಡಿ, ಕೊಳಚೆ ನೀರು ವಿಲೇವಾರಿ ಮುಂತಾದ ಮಾಲಿನ್ಯ ಮೂಲಗಳಿಂದ ಕನಿಷ್ಠ 25 ಅಡಿ ಅಂತರವನ್ನು **ಕಾಪಾಡಿಕೊಳ್ಳಬೇ**ಕು.

10. ಜಲಶುದ್ಧೀಕರಣ ಘಟಕಗಳನ್ನು ಕಾಲಕಾಲಕ್ಕೆ ಶುದ್ಧೀಕರಿಸಿ, Filter, Membrane, ಸೇರಿ ಇನ್ನಿತರೆ ದುರಸ್ತಿಗೆ ಸಂಬಂಧ ಪಟ್ಟಂತೆ ಸೂಕ್ತ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಂಡು ಎಲ್ಲಾ ಕುಡಿಯುವ ನೀರಿನ ಘಟಕಗಳ ನೀರಿನ ಸ್ಯಾಂಪಲ್ ಅನ್ನು ಬ್ಯಾಕ್ಟಿರಿಯಲ್ ಮತ್ತು ಕೆಮಿಕಲ್ ಪರೀಕ್ಷೆಗೊಳಪಡಿಸುವುದು.

11. ಕುಡಿಯುವ ನೀರನ್ನು ಸರಬರಾಜು ಮಾಡುವ ಜಾಲದಲ್ಲಿ, ಸೋರುವಿಕೆ ಇಲ್ಲದಂತೆ ನೋಡಿಕೊಳ್ಳುವುದು. ಸೋರುವಿಕೆ ಇದ್ದಲ್ಲಿ ತಕ್ಷಣವಾಗಿ ಸೋರುವಿಕೆಯನ್ನು ತಡೆಗಟ್ಟಲು ಕ್ರಮವಹಿಸುವುದು.

12. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಬರುವ ಎಲ್ಲಾ ಪೈಪ್ ಲೈನ್ ಗಳನ್ನು ಪ್ರತಿದಿನವೂ ಪರಿಶೀಲನೆ ನಡೆಸಿ ಯಾವುದಾದರೂ ಪೈಪ್ ಲೈನ್ ಗಳು ಹಾನಿಯಾಗಿರುವುದು ಕಂಡು ಬಂದಲ್ಲಿ ಕೂಡಲೇ ದುರಸ್ತಿ ಕಾರ್ಯಕೈಗೊಂಡು ಯಾವುದೇ ಮಳೆ ನೀರು/ಕಲುಷಿತ ನೀರು/ಚರಂಡಿ ನೀರು ಸೇರದಂತೆ ಜಾಗ್ರತೆಯನ್ನು ವಹಿಸುವುದು.

13. ಕುಡಿಯುವ ನೀರಿನ ಕೊಳವೆಬಾವಿಗಳ ಸುತ್ತ SOURCE PROTECTION ನಿರ್ಮಿಸುವುದು.

14. ಮನೆ ಮನೆಗೆ ಬೇಟಿ ನೀಡಿ ಕುಡಿಯುವ ನೀರು ಮತ್ತು ಸ್ವಚ್ಛತೆಯ ಕುರಿತು ಅರಿವು ಮೂಡಿಸುವುದು.

15. ನೀರಿನ ಗುಣಮಟ್ಟದ ಪರೀಕ್ಷೆ ಕಾರ್ಯಗಳಿಗೆ ಮಹಿಳಾ ಸ್ವ-ಸಹಾಯ ಗುಂಪುಗಳನ್ನು ತೊಡಗಿಸಿಕೊಳ್ಳುವುದು.

16. ಬೋರ್‌ವೆಲ್ ಮೋಟಾರ್/ಪಂಪ್‌ಗಳ ರಿಪೇರಿ ಸಂದರ್ಭದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಅಗತ್ಯ ಕ್ರಮವಹಿಸುವುದು.

17. ಕುಡಿಯುವ ನೀರಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆದಾರದ ಮೇಲೆ ಪಡೆಯುವುದು, ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು, ಹೊಸ ಕೊಳವೆ ಬಾವಿಗಳನ್ನು ಕೊರೆಸುವುದು, ಪೈಪ್ ಲೈನ್ ಅಳವಡಿಸುವುದು, ವಿದ್ಯುತ್ ಸಂಪರ್ಕ ಕಲ್ಪಿಸುವುದು.

18. ಕುಡಿಯುವ ನೀರು ಸರಬರಾಜು ಮಾಡುವ ಟ್ಯಾಂಕರ್(ಸರ್ಕಾರಿ/ಖಾಸಗಿ) ಗಳನ್ನು ಕಾಲಕಾಲಕ್ಕೆ ತಪಾಸಣೆ ನಡೆಸುವುದು ಹಾಗೂ ಟ್ಯಾಂಕರ್ ಗಳ ಸ್ವಚ್ಛತೆ ಬಗ್ಗೆ ಗಮನವಹಿಸುವುದು.

19. ವರ್ಷಕ್ಕೆ ಕನಿಷ್ಠ ಎರಡು ಬಾರಿ ನೀರು ಸಂಗ್ರಹಣೆ ಓವರ ಹೆಡ್ ಟ್ಯಾಂಕ್‌ಗಳನ್ನು ಸ್ವಚ್ಛಮಾಡುವುದು, ಹಾಗೂ ಸ್ವಚ್ಛವಾಗಿರುವುದನ್ನು ಕಾಲಕಾಲಕ್ಕೆ ಖಚಿತ ಪಡಿಸಿಕೊಳ್ಳುವುದು ಹಾಗೂ ಸ್ವಚ್ಛಗೊಳಿಸುವುದು.

20. ಪ್ರತಿಯೊಂದು ನಗರ ಸ್ಥಳಿಯ ಸಂಸ್ಥೆಗಳು/ಮಹಾನಗರಪಾಲಿಕೆಗಳಲ್ಲಿ ಸಹಾಯವಾಣಿ ಸಂಖ್ಯೆಯನ್ನು ಪ್ರಕಟಿಸಿ, ದೂರುಗಳಿಗೆ ತುರ್ತಾಗಿ ಪ್ರತಿಕ್ರಿಯಿಸುವ ವ್ಯವಸ್ಥೆ ಮಾಡುವುದು.

21. ನೀರು ಸರಬರಾಜು ಸುಗಮ ಕಾರ್ಯಾಚರಣೆಗಾಗಿ ಹಾಗೂ ದುರಸ್ತಿಕಾರ್ಯಗಳಿಗಾಗಿ ಸಾಕಷ್ಟುಯಂತ್ರದ ಬಿಡಿಭಾಗಗಳನ್ನು ಸಂಗ್ರಹಿಸಿಕೊಳ್ಳುವುದು ಮತ್ತು ಈ ಹಿಂದಿನ ಬಳಕೆಗೆ ಅನುಗುಣವಾಗಿ ಅವಶ್ಯಕ ಪ್ರಮಾಣದಲ್ಲಿ Chemical consumables, ಕೊಳವೆ ಮಾರ್ಗಗಳಿಗೆ ಸಾಮಗ್ರಿಗಳನ್ನು ಸಂಗ್ರಹಣೆ ಮಾಡಿಕೊಳ್ಳುವುದು.

22. ಎಲ್ಲಾ ನಗರ ಸ್ಥಳಿಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ/ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳಿಗೆ ನೀರಿನ ಸಂಪರ್ಕ ನೀಡುವುದನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವುದು.

23. ನೀರನ್ನು ಮಿತವಾಗಿ ಬಳಕೆ ಮಾಡುವ ಕುರಿತು ಜನರಲ್ಲಿ ಜಾಗೃತಿ ಹಾಗೂ ನೀರು ಸಂಗ್ರಹಣೆ ಮಾಡಲು ಹಾಗೂ ಸುರಕ್ಷಿತ ನೀರಿನ ಶೇಖರಣೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

24. ಸಂಭಾವ್ಯ ತುರ್ತು/ದುರಸ್ತಿ ಕಾಮಗಾರಿಗಳನ್ನು ಗುರುತಿಸಿ ಮುಂಚಿತವಾಗಿ ಅಂದಾಜು ಪಟ್ಟಿಗಳನ್ನು ತಯಾರಿಸಿ ಅವಶ್ಯಕ ಅನುಮೋದನೆಗಳನ್ನು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದುಕೊಂಡು ಟೆಂಡರ್ ಕರೆಯಲು ಸಿದ್ಧತೆಗಳನ್ನು ಮಾಡಿಕೊಳ್ಳತಕ್ಕದ್ದು.

25. ನೀರು ಸರಬರಾಜು ಕೆಲಸಕ್ಕೆ ಅವಶ್ಯಕ ಮಾನವ ಸಂಪನ್ಮೂಲ ತೊಡಗಿಸಿಕೊಳ್ಳಲು ಕ್ರಮ ಕೈಗೊಳ್ಳುವುದು.

26. ಪ್ರತಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ/ ಮಹಾನಗರಪಾಲಿಕೆಯಲ್ಲಿ ಬೇಸಿಗೆ ನೀರು ಸರಬರಾಜು ಮೇಲ್ವಿಚಾರಣೆಗೆ ನೋಡಲ್ ಅಧಿಕಾರಿಯನ್ನು ನೇಮಿಸತಕ್ಕದ್ದು.

27. ನಗರ ಆಯುಕ್ತರು/ ಪೌರಾಯುಕ್ತರು/ ಮುಖ್ಯಾಧಿಕಾರಿಗಳು ಸಂಕಷ್ಟ ಪ್ರದೇಶಗಳಲ್ಲಿ ನೀರಿನ ಟ್ಯಾಂಕರ್ ಗಳ ಸ್ಟ್ಯಾಂಡ್ ಬೈ ವ್ಯವಸ್ಥೆಯನ್ನು ಹಾಗೂ ದೂರು ಪರಿಹಾರ ವ್ಯವಸ್ಥೆಯನ್ನು ಸಕ್ರಿಯಗೊಳಿಸಿ ಪ್ರತಿದಿನ ಜವಾಬ್ದಾರಿಯುತವಾಗಿ ಮೇಲ್ವಿಚಾರಣೆ ಮಾಡಬೇಕು.

28. ಮೇಲ್ಕಂಡ ಸೂಚನೆಗಳನ್ನು ನಗರ ಸ್ಥಳೀಯ ಸಂಸ್ಥೆಯ ಅಭಿಯಂತರರು (ನೀರು ಸರಬರಾಜು) ಅನುಷ್ಠಾನಕ್ಕೆ ನೇರವಾಗಿ ಹೊಣೆಗಾರರಾಗಿರುತ್ತಾರೆ ಹಾಗೂ ಆರೋಗ್ಯಾಧಿಕಾರಿಗಳು ನೀರಿನ ಗುಣಮಟ್ಟ ಮೇಲ್ವಿಚಾರಣೆ ಮತ್ತು ಮಾಲಿನ್ಯ ಕಂಡುಬಂದಲ್ಲಿ ಸಮನ್ವಯ ಕಾರ್ಯಗಳಿಗೆ ಜವಾಬ್ದಾರರಾಗಿರುತ್ತಾರೆ.

29. ನೀರಿನ ಮಾಲಿನ್ಯ, ಜಲಜನ್ಯ ರೋಗ ಸ್ಫೋಟ ಅಥವಾ ಸಾರ್ವಜನಿಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾದ ನಿರ್ಲಕ್ಷ್ಯವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿತ ಅಧಿಕಾರಿಗಳ ಮೇಲೆ ಹೊಣೆಗಾರಿಕೆ ನಿಗದಿಪಡಿಸಲಾಗುವುದು.

ಎಲ್ಲಾ ಯೋಜನಾ ನಿರ್ದೇಶಕರು/ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಇವರು ಮೇಲ್ಕಂಡ ಸೂಚನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಕೈಗೊಂಡು ಪೌರಾಡಳಿತ ನಿರ್ದೇಶನಾಲಯಕ್ಕೆ ಪ್ರತಿ ತಿಂಗಳು ವರದಿ ನೀಡುವುದು.

Digitally signed by
PN RAVINDRA
Date: 10-03-2026
[illegible]
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಇವರಿಗೆ,

1. ಜಿಲ್ಲಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲೆಗಳು.
2. ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ ರಾಜ್ಯದ ಎಲ್ಲಾ ಜಿಲ್ಲೆಗಳು
3. ಆಯುಕ್ತರು, ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು
4. ಪೌರಾಯುಕ್ತರು /ಮುಖ್ಯಾಧಿಕಾರಿಗಳು ರಾಜ್ಯದ ಎಲ್ಲಾ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳು/ಅಧಿಸೂಚಿತ ಪ್ರದೇಶ ಸಮಿತಿಗಳು.

| Frequency as per the water source | Parameters |
|---|---|
| | such as fluoride, if any<br>Microbiological: Faecal coliforms/Thermo tolerant coliforms. |
| ***Note: Emerging Contaminants have to be handled separately*** | |

### 8.5.3.2 Sampling at Water Treatment Plants

The water source is presumed to be protected, and a conventional water treatment plant is provided to remove naturally occurring contaminants. Other sources of contaminants are either properly treated before disposal, or sufficient dilution is available in recipient water bodies.

In case geogenic contaminant is not present in groundwater, it requires only disinfection as treatment before consumption. A specific treatment is essential if geogenic contaminant is present in water. Groundwater requires less extensive treatment than surface water. For surface water sources, water treatment involves aeration, coagulation, flocculation, sedimentation, filtration, and disinfection. Water treatment for geogenic contaminants can be categorized based on treatment processes such as filtration, electrocoagulation, adsorption, etc.).

The minimum frequency of key water quality parameters for surface and groundwater sources at the outlet of water treatment plants are presented in Table 8.2. In case blended water (surface and groundwater are used in a treatment plant), water quality parameters for both surface and groundwater sources as mentioned in Table 8.2 should be monitored.

**Table 8.2: Frequencies and Parameters for at the outlet of Water Treatment Plants based on Surfacewater and Groundwater Sources**

| **Frequency as per the water source for water treatment plant** | **Parameters** |
|---|---|
| **Rivers and lakes/reservoirs** | **Everyday**<br>General: Colour, Odour, Turbidity, EC, Total Dissolved Solid (TDS)<br>Microbiological: Faecal coliforms/Thermo tolerant coliforms.<br>**Once a month**<br>Metals: Aluminium |

| Frequency as per the water source for water treatment plant | Parameters |
|---|---|
| **Ground water** | **Everyday**<br>General: Colour, Odour, Turbidity, EC, Total Dissolved Solid (TDS), Free chlorine<br>Microbiological: Faecal coliforms/Thermo tolerant coliforms.<br>**Once a month**<br>Toxic Metals: Aluminium<br>Other: As per the quality of groundwater such as fluoride, arsenic etc. (to be decided by the concerned authority) |

#### 8.5.3.3 Water Quality Sampling in Distribution Network

The distribution network (system) is the most important element of the water supply system which directly connects with the people. Water is transported from the treatment plant by a pipeline under pressure. The primary aim of the network is to supply water to consumers in pre-defined quantities at sufficient pressure and which can directly used from tap under 'Drink from Tap' initiative. A distribution network connects pipes, storage/service reservoirs, intermediate pumping systems, valves, and household service connections.

Water after treatment is stored in elevated reservoirs to have sufficient pressure to transport water in the distribution network. Chlorination may also be provided at these reservoirs to maintain an appropriate residual chlorine level (0.2-0.5 mg/L) to compensate for chlorine loss in the distribution network.

Water quality significantly deteriorates in the distribution system/network primarily due to intermittent supply.Rapid and haphazard urbanization often leads to overwhelming water demand, thus, unplanned expansion of distribution systems. Intermittent and erratic water supply, inadequate disinfection residual, leakages, low pressure, and corrosion/incrustation of the pipelines largely contribute to water quality deterioration in the distribution system. Major contaminants of concern are pathogens in the water distribution system.

Although water quality should be monitored at many sampling locations in distribution systems, resource constraints often restrict the number of samples. Guidance is available to select water quality sampling locations is provided in Table 8.3.

**Table 8.3: Minimum Sampling Frequency from Distribution System**

| Population Served | Maximum interval between | Minimum no. of samples to be taken from entire |
|---|---|---|

| | successive sampling | distribution system |
|---|---|---|
| Upto 20,000 | Four days | One sample per Ward/ DMA |
| 20,000-50,000 | Four days | |
| 50,000-1,00,000 | Two days | |
| More than 1,00,000 | One day | |

This sampling frequency is only for guidance purposes, and it is recommended that the water quality sampling be carried out daily so that the each area of particular ward is covered within a month period. This will help in capturing any water quality contamination event quickly. As highlighted earlier, water quality in the distribution system is compromised, and a large sampling interval will likely miss these water quality contamination events.

The estimated monthly number of water samples should be equally distributed over one month.

The locations from which samples are collected must be representative of the water supplied in an area. Criteria for selection of sampling points are as follows:

- DMA entry points
- Number of samples in a particular DMA/ Zone shall be proportionate to the number of quality related complaints received.
- The location has to be decided considering the history of contamination of water supply in any area (contamination hotspots)
- Connections that are downstream of old pipelines crossing nallas/ stream/ polluted area.
- In the case of District Metered Areas (DMA) with high Non-Revenue Water (NRW) the number of samples can be decided considering the magnitude of NRW.
- House connection ferrule points are considered as the potential leaking points and these points can also be considered as the sampling locations.
- Locations reported to have water borne diseases. The local hospitals should be consulted periodically to identify such locations

When choosing sampling sites, each location should be considered separately. The following general criteria are proposed as general guidelines:

(i) The sampling points should be chosen in such a fashion that the samples collected are representative of the source from which water is procured;

(ii) The sampling points should include those which yield samples representative of the conditions at the water supply, especially points of potential contamination;

(iii) The sampling sites should be distributed evenly throughout a water supply distribution systems; and

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ *

ಸಂಖ್ಯೆ:ಕವಿಪ:158ನೇಮುಅ:2026

ವಿಧಾನ ಪರಿಷತ್ತಿನ ಸಚಿವಾಲಯ
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನ ಸೌಧ
ಡಾ:ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು-560 001,ದಿನಾಂಕ:27.02.2026

ಪ್ರಧಾನ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ/
ಸರ್ಕಾರದ ಕಾರ್ಯದರ್ಶಿಯವರಿಗೆ,
**ನಗರಾಭಿವೃದ್ಧಿ ಇಲಾಖೆ.**

ಮಾನ್ಯರೇ,

ಸಭಾಪತಿಯವರು ಅಂಗೀಕರಿಸಿದ ರೀತ್ಯಾ ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆಯನ್ನು ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:** **(1503)**

1326

ತಮ್ಮ ನಂಬುಗೆಯ,

ಕಾರ್ಯದರ್ಶಿಯವರ ಪರವಾಗಿ
ಕರ್ನಾಟಕ ವಿಧಾನ ಪರಿಷತ್ತು

**ಸಮೂಹ:II**
**ಉತ್ತರಿಸಬೇಕಾದ ದಿನಾಂಕ:17.03.2026**

ವಿಧಾನ ಪರಿಷತ್ತಿನ ಸದಸ್ಯರಾದ **ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ)** ಅವರ ಪ್ರಶ್ನೆಯನ್ನು ಕಳುಹಿಸಿಕೊಡಲಾಗಿದೆ.

**ವಿಷಯ: ಕುಡಿಯುವ ನೀರು ಗುಣಮಟ್ಟ ಪರೀಕ್ಷಿಸುವ ಕುರಿತು.**

**ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು** ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸಾರ್ವಜನಿಕ ಕುಡಿಯುವ ನೀರು ಪೂರೈಸುವ ಪೂರ್ವದಲ್ಲಿ ನೀರಿನ ಗುಣಮಟ್ಟ ಪರೀಕ್ಷಿಸಿ ಸರಬರಾಜು ಮಾಡಬೇಕಿರುವುದು ನಿಜವೇ; ಹಾಗಿದ್ದಲ್ಲಿ, ಎಷ್ಟು ದಿನಗಳಗೊಮ್ಮೆ ನೀರಿನ ಗುಣಮಟ್ಟ ಪರೀಕ್ಷಿಸಬೇಕು; ಈಗ ಎಷ್ಟು ದಿನಕ್ಕೆ ಪರೀಕ್ಷಿಸಲಾಗುತ್ತಿದೆ; (ವಿವರವಾಗಿ ಮಾಹಿತಿ ನೀಡುವುದು)

(ಆ) ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಕೆ.ಆರ್.ಪೇಟೆ ಮತ್ತು ಇತರೆ ಸ್ಥಳೀಯ ಸಂಸ್ಥೆಗಳು ನಿಯಮಿತವಾಗಿ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷಿಸದೇ ನೀರು ಪೂರೈಕೆ ಮಾಡಲಾಗುತ್ತಿದೆ ಎನ್ನುವ ಸಾರ್ವಜನಿಕ ದೂರುಗಳು ಕುರಿತು ಸರ್ಕಾರದ ಕ್ರಮವೇನು;

(ಇ) ಹಾಗೇ, ಮದ್ದೂರು, ಮಳವಳ್ಳಿ, ನಾಗಮಂಗಲ ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಪರೀಕ್ಷಿಸಲಾದ ನೀರಿನ ಮಾದರಿಗಳಲ್ಲಿ E.coli (Escherichia Coli) ಹಾಗೂ ಇತರೆ ಅಶುದ್ಧ ಅಂಶಗಳು ಇರುವುದು ಕಂಡ ಬಂದಿರುವುದು ನಿಜವೇ; ಹಾಗಿದ್ದಲ್ಲಿ, ಗುಣಮಟ್ಟದ ನೀರು ಪೂರೈಕೆಗೆ ಸರ್ಕಾರದ ಕ್ರಮವೇನು;

ಈ) "ಜಲ-ಹೀ-ಅಮೃತ್" ಯೋಜನೆ ಪ್ರಮುಖ ಅಂಶಗಳೇನು;

ಉ) ಈ ಯೋಜನೆಗೆ ಮಂಡ್ಯ ಜಿಲ್ಲೆಯಲ್ಲಿ ಯಾವ್ಯಾವ ಸ್ಥಳೀಯ ಸಂಸ್ಥೆಗಳು ಆಯ್ಕೆಯಾಗಿವೆ; ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಈ ಯೋಜನೆಯಡಿ ಏನೆಲ್ಲಾ ಚಟುವಟಿಕೆಗಳನ್ನು ತೆಗೆದುಕೊಳ್ಳಲು ಅವಕಾಶವಿದೆ? (ವಿವರವಾದ ಮಾಹಿತಿ ನೀಡುವುದು)

ರಾಘು

MO 9740660782